RNU AIR DHARWAD

APRIL 13, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

<><><>

- **ಯಾದಗಿರಿ ಜಿಲ್ಲೆಯ, 12 ಸಾವಿರ ಹೆಕ್ಟರ್** ಕೃಷಿ ಭೂಮಿಯಲ್ಲಿ, ತೋಟಗಾರಿಕೆ; ಆರ್ಥಿಕ ಸ್ವಾವಲಂಬನೆಯತ್ತ, ಒಣ ಬೇಸಾಯದ ರೈತರು.
- **'ನಾರಿ ಶಕ್ತಿ ವಂದನೆ ಅಧಿನಿಯಮ'**: ಇದೇ 16 ರಿಂದ 18ರ ವರೆಗೆ, ಸಂಸತ್ತಿನ ವಿಶೇ ’ ಅಧಿವೇಶನ; ಬಿಜೆಪಿ ಸಂಸದರಿಗೆ, ವಿಪ್ ಜಾರಿ.
- **ಪ್ರಧಾನಮಂತ್ರಿ ನರೇಂದ್ರ ಮೋದಿ,** ನಾಡಿದ್ದು 15 ರಂದು, ಮಂಡ್ಯ ಜಿಲ್ಲೆ, ನಾಗಮಂಗಲದ, ಶ್ರೀ ಕ್ಷೇತ್ರ, ಆದಿಚುಂಚನಗಿರಿಗೆ ಭೇಟಿ.
- **ಸಂಸ್ಕೃತ ಭಾರತಿ;** ಇಂದಿನಿಂದ 24ನೇ ತಾರೀಖಿನ ವರೆಗೆ, ಪುತ್ತೂರಿನಲ್ಲಿ, ಶ್ರೀಸಾಮಾನ್ಯರಿಗೆ, ಉಚಿತ, ಸಂಸ್ಕೃತ ಸಂಭಾಷಣೆ ಶಿಬಿರ.

<><><>

**ಈಗ ವಾರ್ತೆಗಳ ವಿವರ**

<><><>

**ಕೇಂದ್ರ ಪುರಸ್ಕೃತ, ರಾಷ್ಟ್ರೀಯ ತೋಟಗಾರಿಕೆ ಮಿಷನ್** ಹಾಗೂಪ್ರಧಾನಮಂತ್ರಿ ಕೃಷಿ ಸಿಚಾಯಿ ಯೋಜನೆ ಅಡಿ, ಯಾದಗಿರಿ ಜಿಲ್ಲೆಯಲ್ಲಿ, ಅಂದಾಜು 12 ಸಾವಿರ ಹೆಕ್ಟರ್ ಕೃಷಿ ಭೂಮಿಯಲ್ಲಿ, ಈಗ ತೋಟಗಾರಿಕೆ ಬೆಳೆಗಳನ್ನು ರೈತರು ಪರ್ಯಾಯವಾಗಿ ಬೆಳೆಯಲಾರಂಭಿಸಿದ್ದಾರೆ. ಮಳೆ ಆಶ್ರಿತ, ತೊಗರಿ ಹಾಗೂ ಭತ್ತದ ಬೆಳೆಗಳಿಗೆ ಹೆಸರಾಗಿದ್ದ, ಕಲ್ಯಾಣ ಕರ್ನಾಟಕದ ಯಾದಗಿರಿ ಜಿಲ್ಲೆಯ ಕೃಷಿ, ಒಣ ಬೇಸಾಯಕ್ಕೆ ಮೀಸಲಿತ್ತು. ಹುಣಸಗಿ ತಾಲೂಕು, ನಾರಾಯಣಪುರ ಜಲಾಶಯದಿಂದ, ಕಾಲುವೆಗಳ ಮೂಲಕ ನೀರು ಒದಗಿದ ಪರಿಣಾಮ, ಯಾದಗಿರಿ ಜಿಲ್ಲೆಯ ಬಹುಪಾಲು ರೈತರು, ಈಗ ಕಲ್ಲಂಗಡಿ, ಮಾವು, ಪಪ್ಪಾಯಿ ಹಾಗೂ ನಿಂಬೆ ಸೇರಿದಂತೆ, ಬ್ಯಾಡಗಿ ಮೆಣಸಿನಕಾಯಿಯ ವಿವಿಧ ತಳಿಗಳನ್ನು, ತೊಗರಿ ಹಾಗೂ ಭತ್ತದ ಬೆಳೆಗಳಿಗೆ ಪರ್ಯಾಯವಾಗಿ, ಬೆಳೆಯುತ್ತಿದ್ದಾರೆ.

<><><>

**ಈ ಕುರಿತು ಒಂದು ವರದಿ..**

<><><>

***ಹೊಸದಿಲ್ಲಿಯ, ಕೃಷಿ ಅನುಸಂಧಾನ ಪರಿಷತ್ ಸಂಚಾಲಿತ, ಯಾದಗಿರಿಯ ಮಹಾತ್ಮ ಗಾಂಧಿ ಕೃಷಿ ವಿಜ್ಞಾನ ಕೇಂದ್ರ ಹಾಗೂ ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ, ತೋಟಗಾರಿಕೆ ಬೆಳೆಗಳ, ಯಾದಗಿರಿ ವಿಸ್ತರಣಾ ಕೇಂದ್ರ ಹಾಗೂ ತೋಟಗಾರಿಕೆ ಮತ್ತು ಕೃಷಿ ಇಲಾಖೆಗಳ ತಾಂತ್ರಿಕ ಸಹಾಯ ಹಾಗೂ ಆರ್ಥಿಕ ಸಹಕಾರದಲ್ಲಿ, ಯಾದಗಿರಿ ಜಿಲ್ಲೆಯ ರೈತರು, ಗಣನೀಯ ಪ್ರಮಾಣದಲ್ಲಿ ಹನಿ, ತುಂತುರು ಹಾಗೂ ಸೂಕ್ಷ್ಮ ನೀರಾವರಿ ಪದ್ಧತಿ ಅಳವಡಿಸಿಕೊಂಡು, ತೋಟಗಾರಿಕೆ ಕೃಷಿ ಕೈಗೊಳ್ಳುತ್ತಿದ್ದಾರೆ. ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿದ, ಭೌಗೋಳಿಕ ಸೂಚ್ಯಾಂಕ – ಜಿ.ಐ.ಟ್ಯಾಗ್ ಮಾನ್ಯತೆ ಪಡೆದ, ಬ್ಯಾಡಗಿ ಮೆಣಸಿನಕಾಯಿ ತಳಿಗುಣವುಳ್ಳ, ರುದ್ರ ತಳಿ ಹಾಗೂ ವಿಜಯಪುರ ಜಿಲ್ಲೆ, ಇಂಡಿ ನಿಂಬೆಗೆ, ಯಾದಗಿರಿ ಜಿಲ್ಲೆಯ ಬಹುತೇಕ ಪ್ರಯೋಗಶೀಲ ಕೃಷಿಕರು, ತಮ್ಮ ತೋಟಗಳಲ್ಲಿ ಬೆಳೆದು, ಗಣನೀಯ ಪ್ರಮಾಣದ ಲಾಭ ಪಡೆಯುತ್ತಿದ್ದಾರೆ. ಬಿರು ಬಿಸಿಲಿನ ಹಿನ್ನೆಲೆ, ನಗರನಾಡಿನ ಹಣ್ಣುಗಳಿಗೆ, ವಿಶೇಷ ರುಚಿ. ರಫ್ತಿಗೂ ಯೋಜಿಸಲಾಗುತ್ತಿದೆ.***

<><><>

**ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ,** ಹೆಚ್ಚಿನ ಮಾಹಿತಿ ನೀಡಿದ್ದಾರೆ, ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ, ವಿಸ್ತರಣಾ ನಿರ್ದೇಶಕ, ಡಾಕ್ಟರ್ ವೆಂಕಟೇಶಲು.

<><><>

**ಆರತಿ ದೇವಶಿಖಾಮಣಿ (55) + ಡಾಕ್ಟರ್ ವೆಂಕಟೇಶಲು ಧ್ವನಿ (50) ಸೆಕೆಂದುಗಳು**

<><><>

**ಸಂಸತ್ತಿನ ಬಜೆಟ್ ಅಧಿವೇಶನವನ್ನು,** ಕೇಂದ್ರ ಸರ್ಕಾರ ವಿಸ್ತರಿಸಿದ್ದು, ಇದೇ 16 ರಿಂದ 18ರ ವರೆಗೆ, ಮೂರು ದಿನಗಳ, ವಿಶೇ ׳ ಅಧಿವೇಶನ ನಡೆಯಲಿದೆ. 2029ರ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳನ್ನು, ಮಹಿಳಾ ಮೀಸಲಾತಿಯೊಂದಿಗೆ ನಡೆಸಲು, 'ನಾರಿ ಶಕ್ತಿ ವಂದನೆ ಅಧಿನಿಯಮ' ಜಾರಿಗೊಳಿಸಲು, ಕೇಂದ್ರ ಉದ್ದೇಶಿಸಿದೆ. ಮಹಿಳಾ ಮೀಸಲಾತಿ ಕಾಯ್ದೆ, ಲೋಕಸಭೆ ಸಂಸದರ ಸ್ಥಾನಗಳನ್ನು, 816ಕ್ಕೆ ಹೆಚ್ಚಿಸಲಿದ್ದು, ಆ ಪೈಕಿ, 273 ಸ್ಥಾನಗಳನ್ನು, ಮಹಿಳೆಯರಿಗೆ ಮೀಸಲಿಡಲಿದೆ. ಕಳೆದ 2023ರಲ್ಲಿ, ಸಂವಿಧಾನದ ಸೂಕ್ತ ತಿದ್ದುಪಡಿ ಮೂಲಕ, ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ, ಮಹಿಳೆಯರಿಗೆ ಶೇಕಡ 33ರ ಸ್ಟ ಮೀಸಲಾತಿ ಒದಗಿಸುವ, ನಿಬಂಧನೆ ಜಾರಿಗೊಳಿಸಲಾಗಿದೆ.

<><><>

**ಮಹಿಳಾ ಮೀಸಲಾತಿ ತಿದ್ದುಪಡಿ ಮಸೂದೆಯನ್ನು** ಕೇಂದ್ರೀಕರಿಸಿದ, ವಿಶೇ ׳ ಅಧಿವೇಶನದಲ್ಲಿ, ಎಲ್ಲ ಕೇಂದ್ರ ಸಚಿವರು ಮತ್ತು ಸಂಸದರು, ಮೂರು ದಿನವೂ ಸದನದಲ್ಲಿ ಉಪಸ್ಥಿತರಿರುವಂತೆ, ಬಿ.ಜೆ.ಪಿ. ವಿಪ್ ಜಾರಿಗೊಳಿಸಿದೆ.

<><><>

**'ನಾರಿ ಶಕ್ತಿ ವಂದನೆ ಅಧಿನಿಯಮ'ದ ಕುರಿತು,** ವಿಜಯನಗರ ಜಿಲ್ಲೆ, ಬಿ.ಜೆ.ಪಿ. ಮಹಿಳಾ ಮೋರ್ಚಾದ ಅಧ್ಯಕ್ಷೆ, ಸುವರ್ಣಾ ಆರುಂಡಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ಸುವರ್ಣಾ ಆರುಂಡಿ ಧ್ವನಿ 28 ಸೆಕೆಂದುಗಳು**

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(42 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ,** ನಾಡಿದ್ದು 15 ರಂದು, ಮಂಡ್ಯ ಜಿಲ್ಲೆ, ನಾಗಮಂಗಲದ, ಶ್ರೀ ಕ್ಷೇತ್ರ ಆದಿಚುಂಚನಗಿರಿಗೆ ಭೇಟಿ ನೀಡಲಿದ್ದಾರೆ. ಭೈರವೈಕ್ಯ ಶ್ರೀ ಬಾಲಗಂಗಾಧರನಾಥ ಶ್ರೀಗಳ, ಮಂದಿರ ಲೋಕಾರ್ಪಣೆ, ಹಾಗೂ ವಿಗ್ರಹದ ಪ್ರಾಣ ಪ್ರತಿ ಷ್ಠಾಪನೆ ಕಾರ್ಯಕ್ರಮದಲ್ಲಿ, ಪ್ರಧಾನಮಂತ್ರಿ ಭಾಗವಹಿಸಲಿದ್ದಾರೆ. ಪ್ರಧಾನಮಂತ್ರಿಯವರು ಶ್ರೀ ಕ್ಷೇತ್ರಕ್ಕೆ ಆಗಮಿಸುತ್ತಿರುವ ಹಿನ್ನೆಲೆ, ಕೇಂದ್ರದ ಉಕ್ಕು ಹಾಗೂ ಬೃಹತ್ ಕೈಗಾರಿಕೆಗಳ ಖಾತೆ ಸಚಿವ, ಎಚ್.ಡಿ.ಕುಮಾರಸ್ವಾಮಿ, ಆದಿ ಚುಂಚನಗಿರಿಗೆ ಭೇಟಿ ನೀಡಿ, ಪೂರ್ವ ಸಿದ್ಧತೆಗಳನ್ನು, ಪರಿಶೀಲಿಸಿದರು. ಶ್ರೀ ಮಠದ ಪೀಠಾಧಿಪತಿ, ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಸ್ಥಳೀಯ ಜನಪ್ರತಿನಿಧಿಗಳು ಹಾಗೂ ವಿಶೇಷ ಭದ್ರತಾ ಪಡೆ – ಎಸ್.ಪಿ.ಜಿ. ಅಧಿಕಾರಿಗಳು, ಇದ್ದರು.

<><><>

**ಚಿಕ್ಕಮಗಳೂರು ಜಿಲ್ಲೆ, ಶೃಂಗೇರಿ ವ್ಯಾಪ್ತಿಯ,** ನರಸಿಂಹರಾಜಪುರ ಹಾಗೂ ಹಂದೂರು ಸಂಪರ್ಕಿಸುವ, 38 ಕೋಟಿ ರೂಪಾಯಿ ವೆಚ್ಚದಲ್ಲಿ ನೂತನವಾಗಿ ನಿರ್ಮಿಸಲಾದ ಭದ್ರಾ ಹಿನ್ನೀರು ಸೇತುವೆಯನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯ, ಇಂದು ಬೆಳಗ್ಗೆ 10.30ಕ್ಕೆ ಉದ್ಘಾಟಿಸಲಿದ್ದಾರೆ. ಬಳಿಕ, ಟಿ.ಬಿ. ವೃತ್ತದಲ್ಲಿ, ಕ್ಷೇತ್ರದ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ, ಚಾಲನೆ ನೀಡಲಿದ್ದಾರೆ ಎಂದು, ಶಾಸಕ ಟಿ.ಡಿ ರಾಜೇಗೌಡ ತಿಳಿಸಿದರು. ನಿನ್ನೆ ಸಂಜೆಯೇ ಮುಖ್ಯಮಂತ್ರಿ ನರಸಿಂಹರಾಜಪುರ ತಲುಪಿದ್ದಾರೆ.

<><><>

**ಸಂಸ್ಕೃತ ಭಾರತಿ ಮತ್ತು ದೇವಾಲಯ ಸಂವರ್ಧನಾ**ಸಮಿತಿ, ಪುತ್ತೂರು ಜಂಟಿಯಾಗಿ, ಇಂದಿನಿಂದ 24ನೇ ತಾರೀಖಿನ ವರೆಗೆ, ಶ್ರೀ ಸಾಮಾನ್ಯರಿಗೆ, ದಿನಬಳಕೆಯ ಸಂಸ್ಕೃತ ಭಾಷೆ, ಉಚಿತ ಸಂಭಾಷಣಾ ಶಿಬಿರ, ಆಯೋಜಿಸಿವೆ. ದಕ್ಷಿಣಕನ್ನಡ ಜಿಲ್ಲೆ, ಪುತ್ತೂರು ತಾಲೂಕು, ಬೊಳುವಾರು ನವನೀತಂ ಸಭಾಂಗಣದಲ್ಲಿ, ದೈನಂದಿನ ಬದುಕಿನಲ್ಲಿ ಸರಳ ಸಂಸ್ಕೃತ ಸಂಭಾಷಣೆ 10 ದಿನಗಳ ಪ್ರಾತ್ಯಕ್ಷಿಕೆ ಶಿಬಿರ ಜರುಗಲಿದೆ.

<><><>

**ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ** ಮಾಹಿತಿ ನೀಡಿದ್ದಾರೆ, ಪ್ರಯೋಗಶೀಲ ಕೃಷಿಕ ಹಾಗೂ ಸಂಸ್ಕೃತ ಸಂಭಾಷಣೆಕಾರ, ವಸಂತ ಕಜೆ.

<><><>

**ವಸಂತ ಕಜೆ ಧ್ವನಿ 27 ಸೆಕೆಂದುಗಳು**

<><><>

**ಈಗ ಸಂಕ್ಷಿಪ್ತ ಸುದ್ದಿಗಳು:**

<><><>

**ಶಿವಮೊಗ್ಗದ, ತ್ಯಾವರೆಕೊಪ್ಪ ಹುಲಿ ಮತ್ತು ಸಿಂಹಧಾಮದಲ್ಲಿ,** ಪಶು ವೈದ್ಯೆ ಡಾಕ್ಟರ್ ಸಮೀಕ್ಷಾ ರೆಡ್ಡಿ ಅವರ, ಆಕಸ್ಮಿಕ ಸಾವಿಗೆ ಕಾರಣವಾಗಿದ್ದ, ನೀರಾನೆ ಹಂಸಿನಿ ಗರ್ಭದಲ್ಲಿದ್ದ ಮರಿ, ಮೃತಪಟ್ಟಿದೆ ಎಂದು, ಧಾಮದ ಕಾರ್ಯನಿರ್ವಾಹಕ ನಿರ್ದೇಶಕ, ಅಮರಾಕ್ಷರ ಮಾಹಿತಿ ನೀಡಿದ್ದಾರೆ. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ಹಾಗೂ ಮೈಸೂರಿನ ಶ್ರೀ ಚಾಮರಾಜೇಂದ್ರ ಪ್ರಾಣಿ ಉದ್ಯಾನದ, ತಜ್ಞ ವೈದ್ಯರು, ಹಿಪ್ಪೋ ಆರೋಗ್ಯವನ್ನು ಅವಲೋಕಿಸುತ್ತಿದ್ದಾರೆ.

<><><>

<><><>

**ರೌಲಟ್ ಕಾಯ್ದೆ ವಿರುದ್ಧ ಪ್ರತಿಭಟಿಸಲು** ಸೇರಿದ್ದ, ನಿರಾಯುಧ ದೇಶಭಕ್ತರ ಮೇಲೆ, 1919ರ ಏಪ್ರಿಲ್13 ರಂದು, ಜಲಿಯನ್ ವಾಲಾಬಾಗ್‌ನಲ್ಲಿ, ಜನರಲ್ ಡೈಯರ್ ನೇತೃತ್ವದ, ಬ್ರಿಟಿ ್ ಪಡೆ, ಗುಂಡು ಹಾರಿಸಿ ಕೊಂದ, ನೂರಾರು ಜನರಿಗೆ ಶ್ರದ್ಧಾಂಜಲಿ ಸಲ್ಲಿಸುವ ದಿನವಿಂದು.

<><><>

**ಗೋಕಾಕ ಚಳವಳಿ ಸೇರಿದಂತೆ,** ಕನ್ನಡ ನಾಡು–ನುಡಿಗೆ ಅನುಪಮ ಕೊಡುಗೆ ನೀಡಿದ ಮೇರುನಟ, ಪದ್ಮಭೂಷಣ, ಡಾಕ್ಟರ್ ರಾಜಕುಮಾರ ಅವರ, 20ನೇ ಪುಣ್ಯತಿಥಿ ಹಿನ್ನೆಲೆ, ನಾಡಿನಾದ್ಯಂತ ಅವರ ಸ್ಮೃತಿಗೆ, ಶ್ರದ್ಧಾ ಸುಮನ ಅರ್ಪಿಸಲಾಯಿತು.

<><><>

**ಕೊಡಗು ಜಿಲ್ಲೆ, ಪೊನ್ನಂಪೇಟೆ ತಾಲೂಕು,** ಬಾಳೆಲೆ ಗ್ರಾಮದ ಕೆರೆಯಲ್ಲಿ ಈಜಲು ತೆರಳಿದ್ದ, 11 ವರ್ಷದ ಕೃಷ್ಣ ಹಾಗೂ 21 ವರ್ಷದ ಗೌತಮ ಎಂಬ ವಿದ್ಯಾರ್ಥಿಗಳು, ಮುಳುಗಿ ಸಾವನ್ನಪ್ಪಿದ ಘಟನೆ, ವರದಿಯಾಗಿದೆ.

<><><>

**ಕೇಂದ್ರ ಹಣಕಾಸು ಸಚಿವಾಲಯ,** ಡೀಸೆಲ್ ರಫ್ತು ಸುಂಕವನ್ನು, ಲೀಟರ್‌ಗೆ 21 ರೂಪಾಯಿ 50 ಪೈಸೆ ಹೆಚ್ಚಿಸಿದೆ. ಪೆಟ್ರೋಲ್ ರಫ್ತು ಸುಂಕವನ್ನು, ಶೂನ್ಯಕ್ಕಿಳಿಸಲಾಗಿದೆ.

<><><>

**ಕಲಬುರಗಿ ಜಿಲ್ಲಾ ವಿಜ್ಞಾನ ಕೇಂದ್ರದಲ್ಲಿ,** ಇಂದಿನಿಂದ ಮೇ 2ರ ವರೆಗೆ, ಬೇಸಿಗೆ ವಿಜ್ಞಾನ ಶಿಬಿರ ಆಯೋಜಿತವಾಗಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಯಾದಗಿರಿ ಜಿಲ್ಲೆಯ, 12 ಸಾವಿರ ಹೆಕ್ಟರ್** ಕೃಷಿ ಭೂಮಿಯಲ್ಲಿ, ತೋಟಗಾರಿಕೆ; ಆರ್ಥಿಕ ಸ್ವಾವಲಂಬನೆಯತ್ತ, ಒಣ ಬೇಸಾಯದ ರೈತರು.
- **'ನಾರಿ ಶಕ್ತಿ ವಂದನೆ ಅಧಿನಿಯಮ':** ಇದೇ 16 ರಿಂದ 18ರ ವರೆಗೆ, ಸಂಸತ್ತಿನ ವಿಶೇ ್ ಅಧಿವೇಶನ; ಬಿಜೆಪಿ ಸಂಸದರಿಗೆ, ವಿಪ್ ಜಾರಿ.
- **ಪ್ರಧಾನಮಂತ್ರಿ ನರೇಂದ್ರ ಮೋದಿ,** ನಾಡಿದ್ದು 15 ರಂದು, ಮಂಡ್ಯ ಜಿಲ್ಲೆ, ನಾಗಮಂಗಲದ, ಶ್ರೀ ಕ್ಷೇತ್ರ, ಆದಿಚುಂಚನಗಿರಿಗೆ ಭೇಟಿ.
- **ಸಂಸ್ಕೃತ ಭಾರತಿ:** ಇಂದಿನಿಂದ 24ನೇ ತಾರೀಖಿನ ವರೆಗೆ, ಪುತ್ತೂರಿನಲ್ಲಿ, ಶ್ರೀಸಾಮಾನ್ಯರಿಗೆ, ಉಚಿತ, ಸಂಸ್ಕೃತ ಸಂಭಾಷಣೆ ಶಿಬಿರ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>